ರಮೇಶ ಅರೋಲಿ

# ಬೇಂದ್ರೆ ಅಂಬೊ ಕಾವ್ಯದ ಮದ್ದಾಲಿ ದನಿ...

'ಕವಿತಾ ಅಂದ್ರ ಏನಜ್ಜ?' ಕೇಳಿತ್ತು ಪೋರಿ ಬೆರಿಕಿ
ಕಣ್ತೆರೆದು ಹೊಡೆದ್ಹಾಂಗ ಕೊಕ್ಕರೆಯು ಗೊರಕಿ
ಕೈಯೆತ್ತಿ ಬಾ ಅಂತ ಕರೆದ್ಹಾಂಗ ಮುದುಕಿ,
ತೆನೆ ಹಬ್ಬಿ ತುಯ್ದ ಹಂಗ ಹಾರ್ಯಾಡೋ ಗಿಲಕಿ
ಅಲ್ಲ ಯಾವುದು ಹೇಳು ಸಂತ್ಯಾಗ ಇಣಕಿ!

ಕವಿತೆ ಅಂದರೇನು ಎಂಬ ಪುರಾತನ ಪ್ರಶ್ನೆಗೆ ತಮ್ಮದೇ ಜವಾರಿ ಶೈಲಿಯಲ್ಲಿ ವ್ಯಾಖ್ಯಾನ ನೀಡುತ್ತಿದ್ದಾರೇನೊ ದತ್ತಾತ್ರೇಯ ರಾಮಚಂದ್ರ ಬೇಂದ್ರೆ. ಘಾಟಿ ಮುದುಕನ ತುಂಟತನದ ಅವರ ಮಾತು ಮತ್ತು ಕಾವ್ಯದ ಬಗೆಯೇ ಹಾಗೆ. ಅಲ್ಲಿರುವುದು ಶ್ರಾವಣದ ಮಳೆ, ಬರಿ ಬೆಳಗಲ್ಲದ ಬೆರಗು, ಮುಗಿಲ ಮೇಲಿನ ಸೆರಗು, ಕಂಟಿ ಬೇಲಿಯೊಳಗಣ ಕವಳಿ ಹಣ್ಣು, ನೀರಿಗೆ ಬಂದ ಹಳ್ಳಿ ಹೆಣ್ಣು, ಜಿಟಿಜಿಟಿ ಧಾರವಾಡದ ಮಳೆಗೆ ತೊಪ್ಪೆಯಾದ ಮಣ್ಣು ಹೀಗೆ ಒಂದೆ... ಎರಡೆ! ಬೇಂದ್ರೆಯವರ ಕಾವ್ಯದ ಓದು ಒಂದು ರಸ ಗಳಿಗೆ, ಅದನ್ನು ಅವರದೇ ಧಾಟಿಯಲ್ಲಿ ಕೇಳುವುದು ಮತ್ತೊಂದು ಸುಖ.

ಬೇಂದ್ರೆಯವರ ಕಾವ್ಯದ ಭಾಷೆ, ಶೈಲಿ, ವಸ್ತು ಮತ್ತು ರಚನಾ ಕ್ರಮವನ್ನು ನೋಡಿದರೆ ಥಟ್ಟನೆ ಜನಪದಕ್ಕೆ ಸೇರಿಸಿ ಬಿಡುವ ಅವಸರದ ನಿರ್ಣಯಕ್ಕೆ ಬರುವುದೇ ಹೆಚ್ಚು. ಆದರೆ, ಅವರ ಇಡೀ ರಚನೆಗಳನ್ನು ಸ್ಥೂಲವಾಗಿ ಚರ್ಚಿಸಿದರೆ, ಅಲ್ಲಿ ಪ್ರಖರವಾದ ಒಂದು ಬಗೆಯ ಶಿಷ್ಟತೆ ಎದ್ದು ಕಾಣುತ್ತದೆ. ಪುರಾಣ, ಭೌತಶಾಸ್ತ್ರ, ಖಗೋಳ ಶಾಸ್ತ್ರ, ಸಂಖ್ಯಾಶಾಸ್ತ್ರ ಅಲ್ಲದೆ ತಮ್ಮ ಸುತ್ತಲಿನ ನಿತ್ಯದ ಬದುಕಿನಿಂದ ಆಯ್ದುಕೊಳ್ಳುವ ವಸ್ತು ಮತ್ತು ಕಾವ್ಯ ಪ್ರತಿಮೆಗಳು ಅವರನ್ನು ನವೋದಯ ಪಂಥದ ಇತರೆ ಕವಿಗಳಿಗಿಂತ ಭಿನ್ನವಾಗಿ ನಿಲ್ಲಿಸುತ್ತದೆ. ಗರತಿಯೊಬ್ಬಳು ಹಳ್ಳಕ್ಕೆ ನೀರಿಗೆ ಹೋಗುವ ದೃಶ್ಯ, ಸಂಜೆಮುಂಜಾನೆಗಳ ಚಿತ್ರಣ, ಕೆರೆ, ಗಿಜಿಗುಡುವ ಗಿಳಿ ಹಿಂಡು, ಘಮ ಘಮಿಸುವ ಮಲ್ಲಿಗೆ ದಂಡೆ, ಆ ಹೂವಿಗೆ ಮುಗಿ ಬೀಳುವ ಪಾತರಗಿತ್ತಿ, ಆಗಸದ ಸೊಬಗು, ಹದಿಹರೆಯದವರ ಬೆರಗು, ಹುಣಮಿ ಚಂದಿರ, ಚುಕ್ಕಿಯ ಹಂದರ, ಸಂತೆಯೊಳಗಿನ ಜನ, ಮತ್ತವರೊಳಗಿನ ಸಂತೆ ಹೀಗೆ ಇಲ್ಲೆಲ್ಲ ತೆರೆದುಕೊಳ್ಳುತ್ತದೆ ಅವರ ಕಾವ್ಯ.

ಮನುಷ್ಯ ಬದುಕಿನ ಸ್ಥಿತಿ ಒಂದನ್ನು ಎದೆ ಹಿಂಡುವಂತೆ ಮಾಡಿಬಿಡಬಲ್ಲ ಮಾಂತ್ರಿಕತೆ ಅವರ ಅನೇಕ ಭಾವಗೀತೆಗಳಿಗಿದೆ. ತಮ್ಮ ಭಾಷಣವೊಂದರಲ್ಲಿ ಲೇಖಕ ಯು.ಆರ್. ಅನಂತಮೂರ್ತಿ, 'ಬೇಂದ್ರೆ ನವೋದಯ ಕಾಲದ ಬಹು ದೊಡ್ಡ ಕಾಮದ ಕವಿ' ಎಂದಿದ್ದಾರೆ. ಕಾಮ ಎಂಬುದು ದೈಹಿಕ ಮಿಲನಗಳ ಸಂಕುಚಿತ ಅರ್ಥದಲ್ಲಿ ಅಲ್ಲ. ಬದಲಾಗಿ ಪ್ರಕೃತಿಯ ಸೃಷ್ಟಿ ಕ್ರಿಯೆಯನ್ನು ಸೆರೆಹಿಡಿದವರು